(6ನೇ ಪುಟದಿಂದ)

ಆಶ್ಚರ್ಯದಿಂದ ನಾನೂ ಎಲ್ಲರೊಳಗೊಂದಾದೆ. ಪ್ರೌಢಶಾಲೆಯ ಕೊಠಡಿಗಳ ಮುಂದಿನ ಜಗಲಿಯ ತುಂಬೆಲ್ಲ ರಂಗೋಲಿಯ ಸಂಭ್ರಮ! ಬಣ್ಣಗಳೋ ಬಣ್ಣಗಳು. ಪಾಲಕರು ಖುಷಿಯಿಂದ ತಮ್ಮ ಮಕ್ಕಳ ರಂಗೋಲಿಗಳನ್ನು ವೀಕ್ಷಿಸುತ್ತಿದ್ದರು. ಊರ ಜನರ ಪಾಲಿಗೆ ಬಣ್ಣಗಳ ಹಬ್ಬದ ಸಂಭ್ರಮ.

ರಂಗೋಲಿಗಳ ಸ್ಪರ್ಧೆಗಳೇ ನಡೆಯುವ ದಿನಗಳಲ್ಲಿ ಕಚವಿಯ ಶಾಲೆಯ ರಂಗೋಲಿಗಳ ಬಗ್ಗೆ ವಿಶೇಷವಾಗಿ ಹೇಳಲಿಕ್ಕೆ ಕಾರಣವಿದೆ. ಇಲ್ಲಿ ಅರಳಿದ್ದುದು ವಿಜ್ಞಾನದ ರಂಗೋಲಿಗಳು.

ಇತ್ತೀಚೆಗೆ ವಿಜ್ಞಾನ ಬೋಧನೆಯಲ್ಲಿ ಹಲವಾರು ಪ್ರಯೋಗಗಳು ನಡೆಯುತ್ತಿವೆ. ಹಿಂದಿನಂತೆ ಕೇವಲ ಚಾರ್ಟ್‌ಗಳನ್ನು ತೋರಿಸಿ ಉಪನ್ಯಾಸ ಮಾಡಿದರೆ ಯಾವ ವಿದ್ಯಾರ್ಥಿಗಳೂ ಕಿವಿಗೊಡುವುದಿಲ್ಲ. ಈಗ ಪ್ರಯೋಗಾತ್ಮಕ ಹಾಗೂ ಚಟುವಟಿಕೆ ಆಧಾರಿತ ಪಾಠಗಳು ನಡೆಯುತ್ತಿವೆ. ಖಾಸಗಿ ಶಾಲೆಗಳವರು ವಿದ್ಯಾರ್ಥಿಗಳಿಂದ ಸಾಕಷ್ಟು ಡೊನೇಶನ್ ಕಕ್ಕಿಸಿ ಸ್ಮಾರ್ಟ್ ಕ್ಲಾಸ್ ನಡೆಸುತ್ತಾರೆ. ಕೆಲವೇ ಸರ್ಕಾರಿ ಶಾಲೆಗಳಿಗೆ ಗಣಕಯಂತ್ರಗಳ ಅದೃಷ್ಟ. ಹಳ್ಳಿಯ ಬಡ ಮಕ್ಕಳ ಕಲಿಕೆಯ ಗತಿ ಏನು? ಇದನ್ನು ಮನಗಂಡು ಈ ಸರ್ಕಾರಿ ಶಾಲೆಯ ಶಿಕ್ಷಕರು ಕಂಡುಕೊಂಡ ಪರಿಹಾರವೇ ರಂಗೋಲಿಯನ್ನು ಬಿಡಿಸುತ್ತ ವಿಜ್ಞಾನ ಅರ್ಥೈಸಿಕೊಳ್ಳುವುದು.

ಕಚವಿಯ 'ಪದ್ಮಶ್ರೀ ಸರ್ದಾರ ವೀರನಗೌಡ ಪಾಟೀಲ ಸರ್ಕಾರಿ ಪ್ರೌಢಶಾಲೆ'ಯಲ್ಲಿ ಒಟ್ಟು 130 ವಿದ್ಯಾರ್ಥಿಗಳಿದ್ದಾರೆ. ಹತ್ತನೇ ವರ್ಗದ 47 ವಿದ್ಯಾರ್ಥಿಗಳ 15 ತಂಡಗಳನ್ನು ರಚಿಸಿ, ಮುಖ್ಯ ಶಿಕ್ಷಕರಾದ ನಾಡಿಗೇರರ ನೇತೃತ್ವದಲ್ಲಿ ವಿಜ್ಞಾನ ಶಿಕ್ಷಕರಾದ ಅಂಗಡಿಯವರು ಕಾರ್ಯಪ್ರವೃತ್ತರಾದರು. ವಿಜ್ಞಾನದ ವಿಭಾಗಗಳಾದ ಜೀವಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರದ ಪಠ್ಯಪುಸ್ತಕಗಳಿಂದ ರಂಗೋಲಿ ಬಿಡಿಸಲು ಸೂಕ್ತವಾದ ಚಿತ್ರಗಳನ್ನು ಆಯ್ದುಕೊಂಡರು. ಜೊತೆಗೆ ಚಿತ್ರಕಲಾ ಶಿಕ್ಷಕರಾದ ಚಿತ್ರಗಾರ ಅವರ ಪಾತ್ರ ಪ್ರಮುಖವಾಗಿತ್ತು. ಮಕ್ಕಳಿಗೆ ರೇಖಾಚಿತ್ರ ಬಿಡಿಸುವ, ಬಣ್ಣ ತುಂಬುವ ಕೌಶಲ್ಯಗಳನ್ನು ಮನದಟ್ಟು ಮಾಡಿದರು. ಈ ವರ್ಷದ ಜೂನ್ ತಿಂಗಳಿನಿಂದ ಕಾರ್ಯಾಚರಣೆ ಆರಂಭವಾಯಿತು.

ಮುಂದಿನ ಪಯಣ ಮಕ್ಕಳದಾಗಿತ್ತು. ಕುಂತಲ್ಲಿ, ನಿಂತಲ್ಲಿ ಚಿತ್ರಬಿಡಿಸುವ ಕಲೆಯನ್ನು ಕರಗತ ಮಾಡಿಕೊಂಡರು. ಊರ ತುಂಬೆಲ್ಲ ರಂಗೋಲಿ ಪ್ರದರ್ಶನದ ಸುದ್ದಿ ಹರಡಿತು. ಊರವರೂ ತಮ್ಮ ಮಕ್ಕಳ ಪ್ರತಿಭೆ ಅನಾವರಣಗೊಳ್ಳುವುದನ್ನು ನೋಡುವ ಕಾತರದಿಂದ ತುದಿಗಾಲ ಮೇಲೆ ನಿಂತರು. ಕಳೆದ ಅಕ್ಟೋಬರ್ 10ರಂದು ವೇದಿಕೆ ರೆಡಿಯಾಯಿತು.

ಮಕ್ಕಳೇ ರಂಗು ರಂಗಿನ ಬಣ್ಣ ತಂದರು. ಶಾಲೆಯ ಕಟ್ಟೆಯ ಮೇಲೆಲ್ಲ ಮೆದುಳು, ಹೃದಯ, ಮೂತ್ರಜನಕಾಂಗ, ನರವ್ಯೂಹ, ಜೀರ್ಣಾಂಗವ್ಯೂಹ, ಗಂಡು-ಹೆಣ್ಣಿನ ಸಂತಾನೋತ್ಪತ್ತಿವ್ಯೂಹ, ಸಸ್ಯದ ಪತ್ರಹರಿತ್ತು, ಹೂ, ವಿದ್ಯುಜ್ಜನಕ ರಾರಾಜಿಸಿದವು.

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿಯ ಅಧ್ಯಕ್ಷರಾದ ಹುಚ್ಚಣ್ಣನವರು – 'ನಂ ಹುಡುಗ್ರು ಇಷ್ಟು ಚಂದ ಚಿತ್ರ ಬಿಡುಸ್ತಾರ ಅನ್ನೂದು ಗೊತ್ತಿರ್ಲಿಲ್ಲ. ಮಾಸ್ತರು ಒಳ್ಳೆ ಕೆಲ್ಸ ಮಾಡಿಸ್ಯಾರು. ನಮಿಗೆ ನಂ ದೇಹದಾಗ ಏನೇನೈತಿ ಅನ್ನೂದು ಇವತ್ತು ಗೊತ್ತಾತು' ಎಂದು ಸಂತಸ ವ್ಯಕ್ತಪಡಿಸಿದರು.

ಮೂರು ತಂಡಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ನೀಡಿ ಪುರಸ್ಕರಿಸಲಾಯಿತು. ಮಕ್ಕಳ ಹುಮ್ಮಸ್ಸು ವರ್ಣಿಸಲಸದಳವಾಗಿತ್ತು. ಪಾಲಕರ ಎದುರಿಗೆ ಏನೋ ಸಾಧಿಸಿದ ಧನ್ಯತಾಭಾವ ಮೂಡಿತ್ತು.

ಚಿತ್ರಕಲೆಯ ಕೌಶಲವನ್ನು ಮಕ್ಕಳಲ್ಲಿ ಮೂಡಿಸಲು ನನಗೊಂದು ಸದವಕಾಶ ದೊರೆಯಿತೆಂದು ಚಿತ್ರಗಾರ ಮಾಸ್ತರ್ ಸಂತಸ ಪಟ್ಟರೆ, ಅಂಗಡಿ ಮಾಸ್ತರರು 'ಹಳ್ಳಿಯ ಜನರಿಗೆ ವಿಜ್ಞಾನದ ಅರಿವು, ಒಲವು ಚಿಗುರೊಡೆಯಲು ಎಲ್ಲ ಸಹೋದ್ಯೋಗಿಗಳು ನೀಡಿದ ಸಹಕಾರ, ಪಾಲ್ಗೊಳ್ಳುವಿಕೆ ಕಾರಣ' ಎಂದರು.

ಮಕ್ಕಳ ಪ್ರತಿಭೆಗೆ ಹೊಳಪು ನೀಡಿದ ಶಾಲೆಯ ಶಿಕ್ಷಕರ ಬಗ್ಗೆ ಊರವರ ಕಂಗಳಲ್ಲಿ ಅದೇನೋ ಕೃತಜ್ಞತಾ ಭಾವ ಮೂಡಿದ್ದು ಎದ್ದುಕಾಣುತ್ತಿತ್ತು. ಎಲ್ಲ ಶಾಲೆಗಳಲ್ಲೂ ಇಂಥ ಜೀವಪರ ರಂಗೋಲಿಗಳು ಅರಳಬಾರದೇಕೆ?






